https://www.uomonline.com

73207

M-8747

Total No. of Pages : 3

Sl.No.

# ಮೂರನೆಯ ಚತುರ್ಮಾಸ ಬಿ.ಕಾಂ./ಬಿ.ಬಿ.ಎ./ಟಿ.ಹೆಚ್. ಪರೀಕ್ಷೆ, ಅಕ್ಟೋಬರ್/ನವೆಂಬರ್ 2019 (ಸ್ಕೀಮ್ : ಚತುರ್ಮಾಸ – ಸಿಬಿಸಿಎಸ್) ಕನ್ನಡ ಭಾಷೆ (ಪತ್ರಿಕೆ–೩) ಕಾವ್ಯಭಾಗ – ೧ ಮತ್ತು ಕಥನ ಭಾಗ

ಸಮಯ: 3 ಗಂಟೆಗಳು

ಗರಿಷ್ಠ ಅಂಕಗಳು : 80

*ಸೂಚನೆ : 2019–20 ರ ಸಿಬಿಸಿಎಸ್ ವಿದ್ಯಾರ್ಥಿಗಳಿಗೆ.*

## ಕಾವ್ಯ ಭಾಗ (50 ಅಂಕಗಳು)

*ಪ್ರ1)* ಅ) ಒಂದು ಪದ್ಯಭಾಗದ ಭಾವವನ್ನು ಸಂದರ್ಭಸಹಿತ ವಿವರಿಸಿ: [5]

೧) ಜಡೆಗಳೆದು ಮಕುಟಮಂ ನಾರ ಸೀರೆಯನು ತೊಡೆ
ದುಡಿಗೆಯಂ ರುದ್ರಾಕ್ಷಮಾಲೆಯಂ ಕಳೆದು ಮಣಿ
ದೊಡಿಗೆಯಂ ಕಂದಮೂಲವನೊಲ್ಲದೂಟಮಂ ದರ್ಭೆಯಂ ಬಿಟ್ಟಸಿಯನು
ಅಡವಿಯಂ ಬಿಟ್ಟು ನಗರಿಯ ಭಸಿತಮಂ ಬಿಟ್ಟು
ಕಡುಸುಗಂಧಗಳ ಜಿತೇಂದ್ರಿಯತ್ವವ ಬಿಟ್ಟು
ಮಡದಿಯರ ಜಗವಜೆಯೆ ಕೂಡಲು ವ್ರತಕ್ಕೆ ಮುಪ್ಪಾಯ್ತೆ ಮುಪ್ಪಿನೊಳೆಂದರು

೨) ಹರ ತನ್ನ ಭಕ್ತರ ತಿರಿವಂತೆ ಮಾಡುವ
ಒರೆದು ನೋಡುವ ಚಿನ್ನದಂತೆ
ಅರೆದು ನೋಡುವ ಚಂದನದಂತೆ
ಅರಿದು ನೋಡುವ ಕಬ್ಬಿನ ಕೋಲಿನಂತೆ
ಬೆದರದೆ ಬೆಚ್ಚದೆ ಇದ್ದಡೆ
ಕರವಿಡಿದೆತ್ತಿಕೊಂಬ ನಮ್ಮ ರಾಮನಾಥ

*P.T.O.*

https://www.uomonline.com

https://www.uomonline.com



ಆ) ಒಂದು ವಾಕ್ಯದಲ್ಲಿ ಉತ್ತರಿಸಿ: [5 × 1 = 5]

೧) ಆದಾವ ನಮ ಜೋಳವಾದರೆ ಉಳಿದದ್ದು ಯಾವುದು?

೨) ಹಜೆದು ಗೋಣಿಯಲೊಬ್ಬ ಏನನ್ನು ತುಂಬಿದ?

೩) 'ಹದಿಬದೆಯ ಧರ್ಮ' ಕಾವ್ಯವನ್ನು ರಚಿಸಿದವರು ಯಾರು?

೪) 'ಪ್ರಭುಲಿಂಗ ಲೀಲೆ' ಯಾವ ಷಟ್ಪದಿಯಲ್ಲಿ ರಚಿತವಾಗಿದೆ?

೫) ರತ್ನಪುರಿಯ ಅರಸು ಯಾರು?

ಪ್ರ2) ಮೂರು ವಾಕ್ಯಗಳನ್ನು ಸಂದರ್ಭ ಸಹಿತ ವಿವರಿಸಿ: [3 × 4 = 12]

೧) ಮಡದಿಯ ಬಡಿದಾನು ಮನದೊಳಗೆ ಮರುಗ್ಯಾನು

೨) ಎನಗರಸುತ ಮಾದು ಹೋಗಿ ವಿಶ್ವಾಮಿತ್ರ ಮುನಿಗಾದುದು

೩) ಜನಪನಳುಪಿಗೆ ಹಜುವ ಮಾಡುವೆ

೪) ಎನ್ನೊಳಾ ಸಿಂಹವಾಡಿದ ನುಡಿಯನೀಗಳಾಂ ನಿನ್ನೊಳೆಂಬುದು

೫) ಕುವರನಾದೊಡೆ ಬಂದ ಗುಣವೇನದರಿಂದ ಕುವರಿಯಾದೊಡೆಕುಂದೇನು

ಪ್ರ3) ಅ) ಎರಡು ವಿಷಯಗಳಿಗೆ ಟಿಪ್ಪಣಿ ಬರೆಯಿರಿ: [2 × 2 = 4]

ಸಂಚಿಯ ಹೊನ್ನಮ್ಮ, ಮಾಯಾ ಪ್ರಪಂಚ, ದಧೀಚಿ, ಮಾದೇವಿ.

ಆ) ಒಂದು ವಿಷಯವನ್ನು ಕುರಿತು ಸ್ವಂತ ಅಭಿಪ್ರಾಯವನ್ನು ಬರೆಯಿರಿ: [4]

೧) ಜನಪದರ ಬದುಕಿನ ಸಂಬಂಧಗಳ ಗಟ್ಟಿತನವನ್ನು ನೀವು ಕಂಡಂತೆ ವಿವರಿಸಿ.

೨) ಗಂಡು-ಹೆಣ್ಣಿನ ತಾರತಮ್ಯ ಕುರಿತು ನಿಮ್ಮ ಅನಿಸಿಕೆಗಳನ್ನು ಬರೆಯಿರಿ.

ಪ್ರ4) ಒಂದು ಪ್ರಶ್ನೆಗೆ ಉತ್ತರಿಸಿ: [10]

೧) ತಾಮ್ರಧ್ವಜವನ್ನು ಗೆಲ್ಲಲು ಶ್ರೀಕೃಷ್ಣ ಮಾಡಿದ ಉಪಾಯವೇನು? ವಿವರಿಸಿ.

೨) ಕೌಶಿಕ ಮಹಾರಾಜನ ದುರಾಸೆಯಿಂದ ಮುಕ್ತಿಪಡೆಯಲು ಮಾದೇವಿ ಮಾಡಿದ ಉಪಾಯವನ್ನು ಕುರಿತು ಬರೆಯಿರಿ.



https://www.uomonline.com
https://www.uomonline.com
https://www.uomonline.com

https://www.uomonline.com



ಪ್ರ5) ಎರಡು ಪ್ರಶ್ನೆಗಳಿಗೆ ಉತ್ತರಿಸಿ: [2 × 5 = 10]

೧) ವಿಶ್ವಾಮಿತ್ರನಿಗೆ ರಾಜ್ಯ ಸಮರ್ಪಿಸಿ ಹೊರಟ ಹರಿಶ್ಚಂದ್ರನನ್ನು ಕುರಿತು ಪ್ರಜೆಗಳ ಪ್ರತಿಕ್ರಿಯೆಯನ್ನು ವಿವರಿಸಿ.

೨) ವಚನಕಾರರ ದೃಷ್ಟಿಯಲ್ಲಿ ಜೀವನ ಸಾರ್ಥಕತೆಯನ್ನು ನಿರೂಪಿಸಿ.

೩) ಹೆಣ್ಣುಮಕ್ಕಳ ತವರಿನ ಪ್ರೇಮವನ್ನು ಜನಪದ ತ್ರಿಪದಿಗಳ ಹಿನ್ನೆಲೆಯಲ್ಲಿ ಚಿತ್ರಿಸಿ.

೪) 'ಕುವರಿಯಾದೊಡೆ ಕುಂದೇನು' ಕಾವ್ಯಭಾಗದ ಹಿನ್ನೆಲೆಯಲ್ಲಿ ವಿಶ್ಲೇಷಿಸಿ.

## ಕಥನ ಭಾಗ (30 ಅಂಕಗಳು)

ಪ್ರ6) ಒಂದು ಪ್ರಶ್ನೆಗೆ ಉತ್ತರಿಸಿ: [10]

೧) 'ಸೊಸೆಯರ ಸಂಸಾರ' ಪ್ರಬಂಧದಲ್ಲಿ ಕಂಡುಬರುವ ಅತ್ತೆ–ಸೊಸೆಯರ ಬದುಕಿನ ರೀತಿಯನ್ನು ವಿಶ್ಲೇಷಿಸಿ.

೨) 'ಹಣ ಸಂಪಾದನೆಯೇ ಜೀವನದ ಗುರಿಯಲ್ಲ' – 'ಕುಣಿಯುವ ಕುರುಡು ಕಾಂಚಾಣ' ಲೇಖನದ ಹಿನ್ನೆಲೆಯಲ್ಲಿ ಚರ್ಚಿಸಿ.

ಪ್ರ7) ಒಂದು ಪ್ರಶ್ನೆಗೆ ಉತ್ತರಿಸಿ: [10]

೧) ಜೀವನ ಮೌಲ್ಯಗಳನ್ನು ಕುರಿತು ಡಾ.ಕೆ. ರಾಮಣ್ಣ ಅವರಿಗಾದ ಅನುಭವಗಳ ಸ್ವಾರಸ್ಯವನ್ನು ವಿಶ್ಲೇಷಿಸಿ.

೨) ಡಾ.ಜಿ. ಸಂಜೀವರಾಯರ ಬಾಲ್ಯದ ನೆನಪುಗಳನ್ನು ಕುರಿತು ವಿವರಿಸಿ.

ಪ್ರ8) ಎರಡನ್ನು ಕುರಿತು ಸಂಕ್ಷಿಪ್ತವಾಗಿ ಉತ್ತರಿಸಿ: [2 × 5 = 10]

೧) ಸೊಸೆಯರ ಮನೆಗೆ ಭೇಟಿ ನೀಡಿದ ಗಂಗಮ್ಮನಿಗಾದ ಅನುಭವದ ಸ್ವಾರಸ್ಯವನ್ನು ನಿರೂಪಿಸಿ.

೨) ಪರಿಸರ ಸಮತೋಲನದ ಮಹತ್ವವು 'ಪಶ್ಚಿಮ ಘಟ್ಟಗಳ ಪತನ' ಲೇಖನದಲ್ಲಿ ಹೇಗೆ ಮೂಡಿದೆ? ವಿಶದಪಡಿಸಿ.

೩) 'ಮ್ಯಾಡಮ್ ತುಸಾಡ್' ಮೇಣದ ಸಂಗ್ರಹಾಲಯದ ವಿಶೇಷವನ್ನು ಕುರಿತು ಬರೆಯಿರಿ.

೪) ಡಾ.ಜಿ. ಚಂದ್ರಶೇಖರ್ ನಿರೂಪಿಸುವ 'ಅತುಲ್ ಶಾ' ಪ್ರಸಂಗವನ್ನು ವಿವರಿಸಿ.

■ ■ ■


https://www.uomonline.com
https://www.uomonline.com
https://www.uomonline.com